ವಿಷಯ :– ರಾಜ್ಯ ಹಣಕಾಸು ನಿಗಮದಿಂದ ವ್ಯವಸಾಯೇತರರಿಗೆ ಸಾಲ ಸೌಲಭ್ಯ ನೀಡುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 501 (950)

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.?

ಅ) ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ವ್ಯವಸಾಯೇತರರಿಗೆ ಮಾತ್ರ ಸಾಲ ಸೌಲಭ್ಯ ನೀಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ವ್ಯವಸಾಯ ಉದ್ದೇಶಕ್ಕೆ (ಟ್ರಾಕ್ಟರ್, ಪಂಪ್‌ಸೆಟ್, ಟೆಂಪೋ, ತರಕಾರಿಗಳನ್ನು ಸಾಗಾಣಿಕೆ ಮಾಡಲು) ವಾಹನಗಳನ್ನು ಖರೀದಿಸಲು ಸಾಲ ಸೌಲಭ್ಯ ಏರ್ಪಡಿಸಲು ತಕ್ಕ ಕ್ರಮ ತೆಗೆದು ಕೊಳ್ಳಲಾಗುವುದೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಹೌದು. 1951 ರ ರಾಜ್ಯ ಹಣಕಾಸು ಸಂಸ್ಥೆಗಳ ನಿಯಮದ ಪ್ರಕಾರ ಕೈಗಾರಿಕಾ ಚಟುವಟಿಕೆಗಳಿಗೆ ಹಾಗೂ ಕೈಗಾರಿಕೆಗೆ ಪೂರಕವಾದ ಸೇವಾ ಕ್ಷೇತ್ರಗಳಾದಂತಹ ಸಾರಿಗೆ ಉದ್ದಿಮೆ, ಹೋಟೆಲ್, ಉಪಹಾರ ಗೃಹ, ಕೈಗಾರಿಕಾ ವಸಾಹತು, ನರ್ಸಿಂಗ್ ಹೋಂ, ಪ್ರವಾಸೋದ್ಯಮ ಇತರೆ ಉದ್ಯಮ ಕ್ಷೇತ್ರಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಾಲ ಸೌಲಭ್ಯ ದೊರೆಯುತ್ತದೆ.

ಆ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗಳ ನಿಯಮದಂತೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಟ್ರಾಕ್ಟರ್ ಹಾಗೂ ಪಂಪ್‌ಸೆಟ್‌ಗಳಿಗೆ ಮತ್ತು ಕೃಷಿ ಚಟುವಟಿಕೆಗಳಿಗೆ ಸಾಲ ಸೌಲಭ್ಯ ನೀಡಲು ಸಾಧ್ಯವಿರುವುದಿಲ್ಲ. ಆದರೆ ಸಾರಿಗೆ ಉದ್ದಿಮೆಯ ಟೆಂಪೋ, ಮಿನಿ ವ್ಯಾನ್ ಹಾಗೂ ಲಾರಿಗಳನ್ನು ಸಾರ್ವಜನಿಕ ಸಾಗಾಣಿಕೆಗೆ ಕೊಳ್ಳಲು ಸಂಸ್ಥೆಯಿಂದ ಹಣಕಾಸು ಸೌಲಭ್ಯ ದೊರೆಯುತ್ತದೆ.

ವಿಷಯ :– ಸಾಸ್ತಾನದಿಂದ ಕೋಡಿಗೆ ಮಧ್ಯದಲ್ಲಿ ಸೇತುವೆಯ ಸಂಪರ್ಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 503 (848)

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ತಾಲ್ಲೂಕಿನ ಸಾಸ್ತಾನ ಮಂಡಲದಲ್ಲಿ ಸಾಸ್ತಾನದಿಂದ ಕೋಡಿಗೆ ಮಧ್ಯದಲ್ಲಿರುವ ಕೋಡಿ ಹೊಳೆಗೆ ಚಿಕ್ಕ ಸೇತುವೆ ಸಂಪರ್ಕ ಕಲ್ಪಿಸುವ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಈವರೆಗೆ ಕೈಗೊಂಡ ಕ್ರಮಗಳೇನು ? ಹಾಗೂ ಈ ಸೇತುವೆಯ ಕಾಮಗಾರಿಯನ್ನು ಯಾವ ಸಾಲಿನಲ್ಲಿ ಆರಂಭಿಸಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) ಬಂದಿದೆ.

ಆ) ಈ ಸೇತುವೆಗೆ 32 ಲಕ್ಷ ರೂ. ಗಳ ಅಂದಾಜು ಆಗುತ್ತದೆ. ಈ ಕಾಮಗಾರಿಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತಿದ್ದು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಕ್ರಿಯಾ ಯೋಜನೆಯಲ್ಲಿ ಸೇರಿಸುವಂತೆ ಸೂಚನೆಗಳನ್ನು ನೀಡಲಾಗಿದೆ.

ವಿಷಯ :– ಗುಲ್ಬರ್ಗಾ ತಾಲ್ಲೂಕಿನ ಮಿಣಜಗಿ ಗ್ರಾಮದಲ್ಲಿನ ಸೇತುವೆ ಕಟ್ಟಡದ ಕೆಲಸ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 504 (1113)

ಶ್ರೀ ಬಿ. ಎಸ್. ಚವಾಣ್ (ಶಹಾಬಾದ್) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ತಾಲ್ಲೂಕಿನ ಮಿಣಜಗಿ ಗ್ರಾಮದ ಸಮೀಪ ಕಟ್ಟುತ್ತಿರುವ ಹಳ್ಳದ ಸೇತುವೆಯು ಸುಮಾರು 10 ವರ್ಷಗಳ ಹಿಂದೆ ಸರ್ಕಾರದವರು ಕೆಲಸ ಪ್ರಾರಂಭ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಸೇತುವೆಯ ಅಂದಾಜು ವೆಚ್ಚವೆಷ್ಟು? ಇದರಲ್ಲಿ ಖರ್ಚಾದ ಹಣವೆಷ್ಟು? ಉಳಿದ ಹಣವೆಷ್ಟು?

ಇ) 10 ವರ್ಷದಿಂದ ನಡೆಯುತ್ತಿರುವ ಈ ಕೆಲಸ ಇನ್ನೂ ಮುಂದೆ 10 ವರ್ಷದಲ್ಲಿ ಮುಗಿಯುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಬಂದಿದೆ.

ಆ) ಈ ಸೇತುವೆಗಾಗಿ ಮಂಜೂರಾತಿ ಪಡೆದ ಅಂದಾಜು ಮೊತ್ತ ರೂ. 2,10,000-00 ಇದರಲ್ಲಿ ಖರ್ಚಾದ ಹಣ ರೂ. 1,50,000 ಉಳಿದ ಹಣ ರೂ. 60,000-00.

ಇ) ಈ ಕಾಮಗಾರಿಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಈ ಕೆಲಸವು ಈಗಾಗಲೇ ಬುನಾದಿ ತೆಗೆದು ಪೈಪುಗಳು ಕೂಡಾ ಜೋಡಣೆ ಮಾಡಲಾಗಿದೆ. ಹಾಗೂ ಕಾಜ್‌ವೇಯ ಎರಡು ಮುಖಬದಿಗಳು ಪೈಪಿನ ತುದಿಯವರೆಗೆ ಗೋಡೆಗಳನ್ನು ನಿರ್ಮಿಸಲಾಗಿದೆ. ಬಾಕಿ ಉಳಿದ ಕೆಲಸ ಬೇಗನೆ ಪೂರ್ತಿಗೊಳಿಸಲು ಗುತ್ತಿಗೆದಾರರಿಗೆ ನೋಟಿಸುಗಳನ್ನು ಕೊಡಲಾಗಿದೆ. ಬಾಕಿ ಉಳಿದ ಕೆಲಸವನ್ನು ಶೀಘ್ರದಲ್ಲಿ ಪೂರ್ತಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ವಿಷಯ :- ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಖರ್ಚು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 505 (1114)

ಶ್ರೀ ಬಿ. ಎಸ್. ಚವಾಣ್ (ಶಹಾಬಾದ್) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ. ?

ಅ) 1990-91 ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯು ಖರ್ಚು ಮಾಡುತ್ತಿರುವ ಹಣವೆಷ್ಟು ?

ಆ) ಯಾವ ಅರ್ಹತೆಯ ಮೇರೆಗೆ ತಾಂಡಾ ಹಾಗೂ ಊರುಗಳನ್ನು ಈ ಯೋಜನೆಯ ಅಡಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಆಯ್ಕೆ ಮಾಡಲಾಗಿದೆ ?

ಇ) ಅಧಿಕಾರಿಗಳ ನಿರ್ಲಕ್ಷತನದಿಂದ ಆಯ್ಕೆ ಸರಿಯಾಗಿ ಆಗಿರುವುದಿಲ್ಲದಿರುವುದು ನಿಜವೇ? ಈಗ ಇದನ್ನು ಸರಿಪಡಿಸಲಾಗುವುದೇ ?

ಈ) ಹಾಗಿದ್ದಲ್ಲಿ, ಶಹಾಬಾದ್ ಮತಕ್ಷೇತ್ರದ ಗುಲ್ಬರ್ಗಾ ತಾಲ್ಲೂಕಿನಲ್ಲಿ ಆಯ್ಕೆಯಾದ ತಾಂಡಾಗಳೆಷ್ಟು? ಹಾಗೂ ಊರುಗಳೆಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಕೆಳಕಂಡ ಕಾರ್ಯಕ್ರಮಗಳಿಗೆ ರೂ. 5.00 ಕೋಟಿಗಳನ್ನು ಖರ್ಚು ಮಾಡಲಾಗುವುದು.

1) ಟ್ರಾನ್ಸ್‌ಮಿಷನ್ ಲೈನ್‌ಗಳಿಗಾಗಿ 2) 81 ತಾಂಡಾಗಳಿಗೆ ವಿದ್ಯುಚ್ಛಕ್ತಿ ಪೂರೈಕೆಗಾಗಿ.

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಜನಸಂಖ್ಯೆಯ ಆಧಾರದ ಮೇಲೆ 81 ತಾಂಡಾಗಳ ಪಟ್ಟಿಯನ್ನು ಸಿದ್ಧಪಡಿಸಿದ್ದು, ಈ ಪಟ್ಟಿಯನ್ನು ದಿನಾಂಕ 4-9-90 ರಂದು ಸರ್ಕಾರ ಅನುಮೋದಿಸಿದೆ. ಶಹಾಬಾದ್‌ನಿಂದ ಗುಲ್ಬರ್ಗಾದವರೆಗಿನ ಟ್ರಾನ್ಸ್‌ಮಿಷನ್ ಲೈನುಗಳ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರದೇಶದಲ್ಲಿ 110 ಕಿ. ಮೀ. ಸಾಮರ್ಥ್ಯದ ವಿದ್ಯುತ್ ಕೇಂದ್ರದ ಸ್ಥಾಪನೆಗೂ ಸಹ ಸರ್ಕಾರ ಅನುಮೋದನೆ ನೀಡಿದೆ.

ಇ) ಸ್ವೀಕರಿಸಲ್ಪಟ್ಟ ಮನವಿಗಳು ಮತ್ತು ಕೋರಿಕೆಗಳ ಬಗ್ಗೆ ಯಾವ ನಿರ್ಲಕ್ಷ್ಯವನ್ನೂ ತೋರಿಸಿಲ್ಲ. 198 ತಾಂಡಾಗಳು ಪರಿಜನ ಬಸ್ತಿಗಳು ಮತ್ತು ಕೊಪ್ಪಲುಗಳ ಪಟ್ಟಿಯನ್ನು, ಶಾಸಕರಿಂದ ಬಂದ ಮನವಿಗಳ ಆಧಾರದ ಮೇಲೆ ಪರಿಗಣಿಸಿದ್ದು, ಹಂತ ಹಂತವಾಗಿ ವಿದ್ಯುಚ್ಛಕ್ತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

ಈ) 40 ತಾಂಡಾಗಳಲ್ಲಿ, ಚಿತ್ತಾಪುರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತೀಕರಣಕ್ಕಾಗಿ ಈ ವರ್ಷ 4 ತಾಂಡಾಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಕ್ರ.ಸಂ.	ತಾಂಡಾಗಳ ಹೆಸರುಗಳು	ಜನಸಂಖ್ಯೆ	ಅಂದಾಜು ವೆಚ್ಚ
1	ಕಿಂಡಿ ತಾಂಡಾ	800	1.64 ಲಕ್ಷ ರೂ.
2	ಫಾಯಿಲ್ಸ್ ತಾಂಡಾ	450	1.73 ಲಕ್ಷ ರೂ.
3	ಚೌ ಖಾಂಡಿ	400	1.28 ಲಕ್ಷ ರೂ.
4	ಬಾಬುನಾಯ್ಕ ತಾಂಡಾ	400	1.19 ಲಕ್ಷ ರೂ.